ಬ) ಆಯೋಗವು ತಾನು ಸಂಗ್ರಹಿಸಿದ ಸುಸಂಗತ ವಿಷಯಗಳ ಆಧಾರದ ಮೇಲೆ ಸರ್ಕಾರಿ ಆದೇಶ ಕ್ರಮಾಂಕ ಎಸ್‌ಡಬ್ಲ್ಯೂಎಲ್ ೧೨ ಟಿಬಿಎಸ್ ೭೭, ದಿನಾಂಕ ೨೨ನೇ ಫೆಬ್ರುವರಿ ೧೯೭೭ರಲ್ಲಿ ಆದೇಶಿಸಲಾದ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ವೀಸಲಾತಿಯೂ ಮುಂದುವರಿಯಬೇಕೆ ಅಥವಾ ಅವುಗಳಿಗೆ ಯಾವುದೇ ಮಾರ್ಪಾಟು ಅಗತ್ಯವಾಗಿದೆಯೇ ಎಂಬುದನ್ನು ಪರೀಕ್ಷಿಸತಕ್ಕದ್ದು ಹಾಗೂ ಆ ಕುರಿತು ಶಿಫಾರಸು ಮಾಡತಕ್ಕದ್ದು.

೮) ಆಯೋಗವು.—

ಎ) ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಗಣತಿ ಮತ್ತು ವರ್ಗೀಕರಣಕ್ಕೆ ಸಂಬಂಧಿಸಿದ ಪ್ರಶ್ನೆ

ಬಿ) ವೃತ್ತಿ ಶಿಕ್ಷಣ ಕಾಲೇಜುಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾವಕಾಶಗಳಲ್ಲಿ ವೀಸಲಾತಿಗೆ ಸಂಬಂಧಿಸಿದ ಪ್ರಶ್ನೆ.

ಸಿ) ರಾಜ್ಯ ಸರ್ಕಾರೀ ಸೇವೆಗಳಲ್ಲಿ ಹಿಂದುಳಿದ ವರ್ಗಗಳವರಿಗಾಗಿ ಹುದ್ದೆಗಳ ನೇಮಕಾತಿಯಲ್ಲಿ ವೀಸಲಾತಿ ಪ್ರಶ್ನೆ.

ಇವುಗಳಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ಮತ್ತು ಅಂಶಗಳನ್ನು ಪರಿಶೀಲಿಸತಕ್ಕದ್ದು.

೨. ಆಯೋಗದವರು ತಮ್ಮ ಉದ್ದೇಶಕ್ಕಾಗಿ ಅವಶ್ಯಕ ಅಥವಾ ಸುಸ್ವಾಗತವೆಂದು ಪರಿಗಣಿಸ ಬಹುದಾದಂಥ ಮಾಹಿತಿಯನ್ನು ತಾವು ಉಚಿತವೆಂದು ಭಾವಿಸಬಹುದಾದಂಥ ಪ್ರಪತ್ರದಲ್ಲಿ ಮತ್ತು ರೀತಿಯಲ್ಲಿ ರಾಜ್ಯ ಸರಕಾರದಿಂದ ಅಥವಾ ರಾಜ್ಯ ಸರಕಾರಕ್ಕೆ ಅಧೀನವಾಗಿರುವ ಯಾರೇ ಅಧಿಕಾರಿಯಿಂದ ಅಥವಾ ಪ್ರಾಧಿಕಾರಿಯಿಂದ ಅಥವಾ ಆಯೋಗದವರು ತಮಗೆ ಸಹಾಯಕವಾಗುವುದೆಂದು ಅಭಿಪ್ರಾಯಪಡುವಂಥ ಯಾವುದೇ ಸಂಸ್ಥೆಯಿಂದ ಅಥವಾ ಯಾರೇ ವ್ಯಕ್ತಿಯಿಂದ ಪಡೆಯಬಹುದು.

೩. ಆಯೋಗದವರು ರಾಜ್ಯದ ಯಾವುದೇ ಜಿಲ್ಲೆಗೆ ಅಥವಾ ತಾಲ್ಲೂಕಿಗೆ ಭೇಟಿ ಕೊಡಬಹುದು.

೪. ಆಯೋಗವು ತನ್ನ ವರದಿಯನ್ನು ಒಂದು ವರ್ಷದೊಳಗಾಗಿ ರಾಜ್ಯ ಸರಕಾರಕ್ಕೆ ಸಲ್ಲಿಸತಕ್ಕದ್ದು.

೫) ಮೊದಲಿಗೆ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೭ ಬಿಸಿಎ ೮೦ ದಿನಾಂಕ ೧೮-೪-೧೯೮೨ರಲ್ಲಿ ಒಂದು ವರ್ಷದ ಒಳಗಡೆ ವರದಿಯನ್ನು ಸಲ್ಲಿಸಲು ಕಾಲಮಿತಿ ಸೂಚಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಈ ಕಾಲಮಿತಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದೆ. ಕೊನೆಯದಾಗಿ ಆಯೋಗವು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ ೩೧ನೇ ಮಾರ್ಚ್ ೧೯೮೨ರ ವರೆಗೆ ಕಾಲಮಿತಿಯನ್ನು ತೆಗೆದುಕೊಂಡಿದೆ.

೬) ಈ ಬಗ್ಗೆ ಸರ್ಕಾರದ ತೀರ್ಮಾನವು ಎರಡನೇ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಲಿರುವ ವರದಿಯಲ್ಲಿನ ಶಿಫಾರಸುಗಳನ್ನು ಅವಲಂಭಿಸಿರುತ್ತದೆ.

ರಾಜ್ಯದಲ್ಲಿ ಐ.ಟಿ.ಡಿ.ಪಿ. ಘಟಕಗಳ ಬಗ್ಗೆ

೧೩೭೭. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಐಟಿಡಿಪಿ ಘಟಕಗಳು ಎಷ್ಟು?

ಆ. ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ಘಟಕಗಳಿವೆ?

ಇ. ವಿರಾಜಪೇಟೆ ತಾಲ್ಲೂಕಿನಲ್ಲಿ ಇರುವ ಘಟಕಗಳೆಷ್ಟು?

ಈ. ವಿರಾಜಪೇಟೆ ತಾಲ್ಲೂಕಿನ ಘಟಕಕ್ಕೆ ಅವರ ಅಭಿವೃದ್ಧಿ ಕಾರ್ಯಕ್ಕೆ ಮಂಜೂರಾದ ಹಣವೆಷ್ಟು?

ಉ. ಈ ಘಟಕದ ಉದ್ದೇಶ ಮತ್ತು ಸಾಧನೆ ಏನು?

ಊ. ೧೯೮೪-೮೫ರಲ್ಲಿ ಈ ಘಟಕದಿಂದ ಯಾವ ಯಾವ ಬಾಬತ್ತಿನಿಂದ ಎಷ್ಟು ಜನ ಅನುಕೂಲ ಪಡೆದಿದ್ದಾರೆ.

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಯವರು).—

ಅ. ಐದು

ಆ. ಒಂದು

ಇ. ವಿರಾಜಪೇಟೆಗೆ ಅಲಾಯದ ಐಟಿಡಿಪಿ ಘಟಕ ಇಲ್ಲ. ವಿರಾಜಪೇಟೆ ತಾಲ್ಲೂಕು ಮಡಿಕೇರಿ ಐಟಿಡಿಪಿ ಘಟಕದ ವ್ಯಾಪ್ತಿಗೆ ಸೇರುತ್ತದೆ.

ಈ. ೧೯೮೫–೮೬ನೇ ಸಾಲಿನಲ್ಲಿ ಐಟಿಡಿಪಿ ಘಟಕದ ಮೂಲಕ ವಿರಾಜಪೇಟೆ ತಾಲ್ಲೂಕಿಗೆ ೨೪.೮೯ ಲಕ್ಷ ರೂ.ಗಳು ಮಂಜೂರಾಗಿದೆ.

ಉ. ಈ ಐಟಿಡಿಪಿ ಘಟಕದ ಮೂಲ ಉದ್ದೇಶ ಗಿರಿಜನರ ಸರ್ವತೋಮುಖ ಅಭಿವೃದ್ಧಿ, ವಿವಿಧ ಇಲಾಖೆಗಳು ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಗಿರಿಜನರನ್ನು ಬಡತನ ರೇಖೆಯಿಂದ ಮೇಲೆತ್ತಲು ಸಹಾಯ ಮಾಡುವುದು. ಈ ದಿಶೆಯಲ್ಲಿ ೧೯೮೫–೮೬ನೇ ಸಾಲಿನಲ್ಲಿ ೮೦೨ ಗಿರಿಜನ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೆ ಬರಲು ಸಹಾಯ ಮಾಡಲಾಗಿದೆ. ಹಾಗೂ ೧೭,೨೫,೦೩೬ ರೂ.ಗಳನ್ನು ಖರ್ಚು ಮಾಡಲಾಗಿದೆ.

ಊ. ವಿರಾಜಪೇಟೆ ತಾಲ್ಲೂಕಿನಲ್ಲಿ ೧೯೮೪–೮೫ನೇ ಸಾಲಿನಲ್ಲಿ ೧೭,೨೭.೧೫೯ ರೂ. ಗಳನ್ನು ಖರ್ಚು ಮಾಡಿ ೧೦,೬೨೧ ಗಿರಿಜನರಿಗೆ ಅನುಕೂಲ ಕಲ್ಪಿಸಲಾಗಿದೆ. ಇಲಾಖಾವಾರು ಆರ್ಥಿಕ ವಿವರ ಭೌತಿಕ ಪ್ರಗತಿಯನ್ನು ಅನುಬಂಧದಲ್ಲಿ ನಮೂದಿಸಿದೆ.

ಅನುಬಂಧ

ವಿರಾಜಪೇಟೆ ತಾಲ್ಲೂಕಿನಲ್ಲಿ ೧೯೮೪–೮೫ನೇ ಸಾಲಿನಲ್ಲಿ ಆರ್ಥಿಕ ಮತ್ತು ಭೌತಿಕ ಸಾಧನೆ

ಕ್ರಮ ಸಂಖ್ಯೆ	ಇಲಾಖೆ—ನಿಗಮ—ಕಾರ್ಯಕ್ರಮ	ಆರ್ಥಿಕ ಸಾಧನೆ	ಭೌತಿಕ ಸಾಧನೆ
೧	೨	೩	೪
೧	ಕೃಷಿ	೨,೩೪,೩೩೦	೩೫೯
೨	ಪಶುಸಂಗೋಪನಾ	೧,೫೮,೦೦೦	೨೭
೩	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ನಿಗಮ	೮೯,೫೬೪	೧೬೯
೪	ತೋಟಗಾರಿಕೆ	೬೮,೪೬೯	೧೫
೫	ಸಣ್ಣ ನೀರಾವರಿ	೧,೪೦,೦೦೦	೫
೬	ಮಿನಿಂಗಾರಿಕೆ	೩,೫೪೨	೨
೭	ಸಂಪರ್ಕ	೨,೪೩,೦೦೦	೨,೬೨ ಕಿ.ಮೀ.
೮	ಕುಡಿಯುವ ನೀರನ್ನು ಒದಗಿಸುವುದು	೧೪,೪೬೪	—
೯	ರೇಷ್ಮೆ	೫೦,೦೭೦	೨೦
೧೦	ಶಿಕ್ಷಣ	೪,೬೨,೨೦೦	೬,೬೮೮
೧೧	ಸಹಕಾರ	೧,೭೫,೫೦೦	೪೬
೧೨	ಉದ್ಯೋಗ ಮತ್ತು ತರಬೇತಿ	೫೮,೦೦೦	೧೫
	ಒಟ್ಟು	೧೭,೨೭,೧೫೯	೧೦,೬೨೧